# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 442
ಉತ್ತರಿಸಬೇಕಾದ ದಿನಾಂಕ : 19.08.2026
ಸದಸ್ಯರ ಹೆಸರು : ಶ್ರೀ ರಘು ಆರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಯವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಿಂದ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ನಿರ್ವಹಣೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳಿಂದ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ನಿರ್ವಹಣೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಸ</th><th>ವರ್ಷ</th><th>ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>2023-24</td><td>82.35</td></tr>
<tr><td>2</td><td>2024-25</td><td>54.99</td></tr>
<tr><td>3</td><td>2025-26</td><td>51.60</td></tr>
</table>
</td></tr>
<tr><td>ಆ)</td><td>ಚಾಮುಂಡಿ ವಿಹಾರ ಕ್ರೀಡಾಂಗಣದ ನಿರ್ವಹಣೆಯ ಸಂಬಂಧ ಭ್ರಷ್ಟಾಚಾರ ಆರೋಪ ಮತ್ತು ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)</td><td>ಬಂದಿದೆ.<br><br>ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ದಿನಾಂಕ: 09-11-2025 ರಂದು ಮಾನ್ಯ ಉಪ ಲೋಕಾಯುಕ್ತರವರು ಭೇಟಿ ನೀಡಿ, ತಪಾಸಣೆ ಕೈಗೊಂಡಿರುತ್ತಾರೆ. ಸದರಿ ಭೇಟಿಯ ಸಂದರ್ಭದಲ್ಲಿ ನೀಡಿದ್ದ ಸೂಚನೆಗಳಿಗೆ ಕೈಗೊಳ್ಳಲಾದ ಕ್ರಮಗಳ ಕುರಿತು ಅನುಪಾಲನಾ ವರದಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದ ಅಡಿಯಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಅನುದಾನ ಬಿಡುಗಡೆಯಾಗಿದೆಯೇ; (ವಿವರ ನೀಡುವುದು)</td><td>ರಾಜ್ಯ ಸರ್ಕಾರದ ಅನುದಾನದ ಅಡಿಯಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಬಿಡುಗಡೆ ಮಾಡಿರುವ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.<br><br>ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣದಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.</td></tr>
</table>

| | | |
|---|---|---|
| ಈ) | ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರದ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಹಾಗೂ ಪಾರದರ್ಶಕ ನಿಯಮದಡಿಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣದಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. |

ವೈಎಸ್ ಡಿ-ಇಬಿಬಿ/81/2026

(ಡಾ.ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

## ಅನುಬಂಧ-1

ಮಾನ್ಯ ಉಪ ಲೋಕಾಯುಕ್ತರವರು ನೀಡಿರುವ ಸೂಚನೆಗಳನ್ನು ಪಾಲಿಸಿ, ಅನುಪಾಲನೆ ಕೈಗೊಳ್ಳುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಮೈಸೂರು ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಬೋರ್ ವೆಲ್ ನಿಂದ ಸಂಪ್‌ಗೆ, ಓವರ್ ಹೆಡ್ ಟ್ಯಾಂಕ್ ನಿಂದ ಕ್ರೀಡಾ ವಸತಿ ನಿಲಯ ಕಟ್ಟಡಗಳಿಗೆ, ಸಹಾಯಕ ನಿರ್ದೇಶಕರ ಕಛೇರಿಗೆ, ಒಳಾಂಗಣ ಕ್ರೀಡಾಂಗಣ, ಗರಡಿ ಮನೆ ಕಟ್ಟಡಕ್ಕೆ, ವಾಲಿಬಾಲ್ ಮತ್ತು ಬಾಸ್ಕೆಟ್‌ಬಾಲ್ ಕ್ರೀಡಾ ಅಂಕಣಗಳಿಗೆ ಪೈಪ್ ಲೈನ್ ಅಳವಡಿಸುವುದು, ಹಳೆಯ ಕ್ರೀಡಾ ವಸತಿ ನಿಲಯ ಕಟ್ಟಡದ ಹತ್ತಿರದಲ್ಲಿರುವ ಸಂಪ್‌ಗೆ ಕಾವೇರಿ ನೀರು ಸರಬರಾಜು ವ್ಯವಸ್ಥೆಯ ಪೈಪ್‌ಲೈನ್, ಸಂಪ್ ನಿಂದ ಕ್ರೀಡಾ ವಸತಿ ನಿಲಯಗಳಿಗೆ ಪೈಪ್ ಲೈನ್ ವ್ಯವಸ್ಥೆ ಕಲ್ಪಿಸುವುದು, **ಕ್ರೀಡಾ ವಸತಿ ನಿಲಯ ಕಟ್ಟಡಗಳಿಗೆ ಪೈಪ್ ಲೈನ್ ವ್ಯವಸ್ಥೆ, ಮಳೆ ನೀರು ಪೈಪ್ ಅಳವಡಿಸುವುದು**, Inspection Chamber ನಿರ್ಮಿಸುವುದು, **ಹಾಲಿಯಿರುವ ಸಂಪ್‌ನ್ನು ಸ್ವಚ್ಛಗೊಳಿಸುವುದು**, ಬೋರ್‌ವೆಲ್ ಗೆ ಪಂಪ್ ಅಳವಡಿಸುವುದು ಹಾಗೂ ಮತ್ತಿತರ ಕಾಮಗಾರಿಗಳನ್ನು **ರೂ. 73.95 ಲಕ್ಷಗಳ** ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.

2. ಮೈಸೂರು ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಕ್ರೀಡಾ ವಸತಿ ನಿಲಯ ಕಟ್ಟಡಗಳಿಗೆ ಮತ್ತು ಭೋಜನಾಲಯ ಕಟ್ಟಡಗಳಿಗೆ ಬಣ್ಣ ಬಳಿಯುವುದು, ಹಳೆಯ ಭೋಜನಾಲಯ ಕಟ್ಟಡದ ನೆಲಹಾಸಿಗೆ ಟೈಲ್ಸ್ ಅಳವಡಿಸುವುದು, ಕ್ರೀಡಾ ವಸತಿ ನಿಲಯ ಕಟ್ಟಡದ **ಕಿಟಕಿಗಳಿಗೆ ಸೊಳ್ಳೆ ಬಾರದಂತೆ ಮೆಷ್ ಅಳವಡಿಸುವುದು**, **ಹಾಳಾಗಿರುವ ಬಾಗಿಲುಗಳನ್ನು ತೆಗೆದು ಹಾಕಿ ಹೊಸ ಬಾಗಿಲುಗಳನ್ನು ಅಳವಡಿಸುವುದು**, ಹೊಸ ಭೋಜನಾಲಯ ಕಟ್ಟಡದ ಮುಂಭಾಗದಲ್ಲಿ ಶೀಟ್ ಅಳವಡಿಸುವುದು, ಕ್ರೀಡಾ ವಸತಿ ನಿಲಯ **ಕಟ್ಟಡದ ಮೇಲ್ಛಾವಣಿಗೆ ಮತ್ತು ಸಂಪ್‌ಗೆ ವಾಟರ್ ಪ್ರೂಫಿಂಗ್** ಮಾಡುವುದು, ಕ್ರೀಡಾ ವಸತಿ ನಿಲಯ ಕಟ್ಟಡದಲ್ಲಿರುವ **ಶೌಚಾಲಯ ಮತ್ತು ಸ್ನಾನದ ಕೋಣೆಗಳ ಪ್ಲಂಬಿಂಗ್ ದುರಸ್ಥಿ, ವಿದ್ಯುತ್ ಸರಬರಾಜು ದುರಸ್ತಿ**, ಹೊಸ ಭೋಜನಾಲಯ ಕಟ್ಟಡದ ಅರ್ಥಿಂಗ್, ಸೋಲಾರ್ ವಾಟರ್ ಹೀಟರ್ ಅಳವಡಿಸುವುದು, ಮತ್ತಿತರ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು **ರೂ 61.91 ಲಕ್ಷಗಳ** ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.

3. ಕ್ರೀಡಾ ವಸತಿ ನಿಲಯ ಹಾಗೂ ಕ್ರೀಡಾಂಗಣದಲ್ಲಿ ನಿಯಮಿತವಾಗಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ.

4. ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಉತ್ತಮ ಗುಣಮಟ್ಟದ ಹಾಗೂ ರುಚಿಕರ ಊಟೋಪಹಾರವನ್ನು ಒದಗಿಸಲು ಕ್ರಮವಹಿಸಲಾಗಿದೆ. ಪ್ರತಿದಿನ ನೀಡಲಾದ ಆಹಾರದ ಛಾಯಾಚಿತ್ರವನ್ನು ಇಲಾಖಾ ವಾಟ್ಸಾಪ್ ಗ್ರೂಪ್‌ನಲ್ಲಿ ಹಂಚಿಕೊಳ್ಳುವ ಕ್ರಮ ಅಳವಡಿಸಿಕೊಳ್ಳಲಾಗಿದ್ದು, ಯಾವುದೇ ಲೋಪದೋಷ ಕಂಡುಬಂದಲ್ಲಿ ತಕ್ಷಣ ಕ್ರಮವಹಿಸಲಾಗುತ್ತಿದೆ. ಅಲ್ಲದೇ, ಊಟೋಪಹಾರದ ಗುಣಮಟ್ಟದ ಬಗ್ಗೆ ಆಗಿಂದಾಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುತ್ತಿದೆ.

5. ಮೈಸೂರು ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣದಲ್ಲಿರುವ ಮಹಿಳಾ ಕ್ರೀಡಾ ವಸತಿ ನಿಲಯಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ, ಕ್ರೀಡಾ ವಸತಿ ನಿಲಯದಲ್ಲಿರುವ ಬಾಸ್ಕೆಟ್‌ಬಾಲ್ ಅಂಕಣಕ್ಕೆ ಪೋಲ್ಸ್ ಹಾಗೂ ಚೈನ್‌ಲಿಂಕ್ ಬೇಲಿ ಅಳವಡಿಸುವ

ಕಾಮಗಾರಿಯನ್ನು ಕೈಗೊಳ್ಳಲು ರೂ 66.76 ಲಕ್ಷಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

6. ಕ್ರೀಡಾ ವಸತಿ ನಿಲಯದಲ್ಲಿ ಟಿ.ವಿ. ಮತ್ತು ಕೇಬಲ್ ಅಳವಡಿಸಲಾಗಿದ್ದು, ಕ್ರೀಡಾಪಟುಗಳಿಗೆ ಕ್ರೀಡಾ ಪಂದ್ಯಾವಳಿಗಳನ್ನು ವೀಕ್ಷಿಸಲು ಅಗತ್ಯ ಕ್ರಮವಹಿಸಲಾಗಿದೆ.

7. ಒಳಾಂಗಣ ಕ್ರೀಡಾಂಗಣವನ್ನು ಕಾಯ್ದಿರಿಸುವ ಆಯೋಜಕರಿಗೇ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲು ಸೂಚಿಸುವ ಮೂಲಕ ಸ್ವಚ್ಛತೆ ಕಾಪಾಡಲು ಕ್ರಮ ವಹಿಸಲಾಗಿದೆ.

8. ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ, ಕ್ರೀಡಾ ವಿಜ್ಞಾನ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ವಸತಿ ನಿಲಯದ ಕ್ರೀಡಾಪಟುಗಳಿಗೆ ಸದರಿ ಸೌಲಭ್ಯವನ್ನು ಒದಗಿಸಲು ಕ್ರಮವಹಿಸಲಾಗಿದೆ.

9. ಕ್ರೀಡಾ ವಸತಿ ನಿಲಯದ ಹಿರಿಯ ಕ್ರೀಡಾಪಟುಗಳಿಗೆ ಐಸ್ ಕ್ಯೂಬ್ ಬ್ಯಾಗ್‌ಗಳನ್ನು ಒದಗಿಸಲಾಗಿದೆ.

## ಅನುಬಂಧ-2

## ರಾಜ್ಯ ಸರ್ಕಾರದ ಅನುದಾನದ ಅಡಿಯಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಬಿಡುಗಡೆ ಮಾಡಿರುವ ಅನುದಾನದ ವಿವರ

| ಕ್ರಸ | ವರ್ಷ | ಕಾಮಗಾರಿ ಹೆಸರು | ಬಿಡುಗಡೆ ಮಾಡಿರುವ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1 | 2023-24 | ಕ್ರೀಡಾ ವಸತಿ ನಿಲಯಕ್ಕೆ ಆಧುನಿಕ ಮಾದರಿಯ ಅಡುಗೆ ಕೋಣೆ ನಿರ್ಮಾಣ, ಮತ್ತಿತರ ಕಾಮಗಾರಿ | 175.00 |
| 2 | 2024-25 | ಜಿಲ್ಲಾ ಕ್ರೀಡಾಂಗಣದ ಒಳಭಾಗದಲ್ಲಿರುವ ರಸ್ತೆಗಳನ್ನು ಸಿಮೆಂಟ್ ರಸ್ತೆಗಳನ್ನಾಗಿ ನವೀಕರಣ ಕಾಮಗಾರಿ | 200.00 |
| 3 | | ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಜೂನಿಯರ್ ಮತ್ತು ಸೀನಿಯರ್ ಮಹಿಳಾ ಕ್ರೀಡಾ ವಸತಿ ನಿಲಯಗಳ ನವೀಕರಣ ಕಾಮಗಾರಿ | 25.00 |
| 4 | | ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಒಳಾಂಗಣ ಕ್ರೀಡಾಂಗಣಕ್ಕೆ ಮೇಲ್ಚಾವಣಿ ಅಳವಡಿಸುವ ಕಾಮಗಾರಿ | 605.79 |
| 5 | | ದಸರಾ ಕ್ರೀಡಾಕೂಟದ ಪ್ರಯುಕ್ತ ಜಿಲ್ಲಾ ಕ್ರೀಡಾಂಗಣದ ಸೌಲಭ್ಯಗಳ ಉನ್ನತೀಕರಣ ಹಾಗೂ ತುರ್ತು ಕಾಮಗಾರಿ | 45.76 |
| 6 | 2025-26 | ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಈಜುಕೊಳಕ್ಕೆ ಮೇಲ್ಚಾವಣಿ ಅಳವಡಿಸುವ ಕಾಮಗಾರಿ | 893.46 |
| 7 | | ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ಅಂಕಣ ನಿರ್ಮಾಣ ಕಾಮಗಾರಿ | 86.00 |
| 8 | | ಮೈಸೂರು ಚಾಮುಂಡಿ ವಿಹಾರ ಜಿಲ್ಲಾ ಹೊರಾಂಗಣ ಕ್ರೀಡಾಂಗಣದ ಸೀಟಿಂಗ್ ಗ್ಯಾಲರಿಯ ಭಾಗಕ್ಕೆ ಟೆನ್ಸೈಲ್ ಮೆಂಬ್ರೇನ್ ಛಾವಣಿ ಅಳವಡಿಕೆ | 679.21 |
| 9 | | ಮೈಸೂರು ಮಹಿಳಾ ಕ್ರೀಡಾ ವಸತಿ ನಿಲಯಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ, ಬಾಸ್ಕೆಟ್‌ಬಾಲ್ ಅಂಕಣಕ್ಕೆ ಪೋಲ್ಸ್ ಹಾಗೂ ಫೆನ್ಸಿಂಗ್ ಅಳವಡಿಸುವುದು, ವಾಲಿಬಾಲ್ ಅಂಕಣದ ನವೀಕರಣ, ಚೈನ್ ಲಿಂಕ್ ಫೆನ್ಸಿಂಗ್ ಹಾಗೂ ಎಲ್. ಇ.ಡಿ. ದೀಪ ಅಳವಡಿಸುವ ಕಾಮಗಾರಿ | 57.92 |
| 10 | | ಜಿಲ್ಲಾ ಕ್ರೀಡಾಂಗಣದಲ್ಲಿ ಮಿನಿ ಒಳಾಂಗಣ ಕ್ರೀಡಾಂಗಣ ನವೀಕರಿಸುವ ಕಾಮಗಾರಿ | 29.00 |
| 11 | | ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಬಾಲಕ-ಬಾಲಕಿಯರ ಕ್ರೀಡಾ ವಸತಿ ನಿಲಯ ಕಟ್ಟಡ ಮತ್ತು ಭೋಜನಾಲಯ ಕಟ್ಟಡ, ಗ್ರಂಥಾಲಯ ಕಟ್ಟಡದ ವಿವಿಧ ದುರಸ್ತಿ ಕಾಮಗಾರಿ | 61.92 |
| 12 | | ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 73.95 |